**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** – 639/2025 **PW**–2

**ದಿಃ 06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಾದ ಶ್ರೀ ಎಂ ವಿ ಸೋಮಣ್ಣರವರಿಂದಃ**

ನಾನು ಈ ಕೇಸನಲ್ಲಿ ಅರ್ಜಿದಾರ ಪರ ಸಾಕ್ಷಿದಾರನಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ entire case sheet ಹಾಗೂ ಮೂರು ಎಕ್ಸರೆಗಳು ಮತ್ತು ಅಂಗನ್ಯೂನತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಶಾನೆ ಪಿ 13 ರಿಂದ ನಿಶಾನೆ ಪಿ 15 ಎಂದು, ನಿಶಾನೆ ಪಿ 15 ರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ 15(ಎ) ಎಂದು ಗುರ್ತಿಸಲಾಯಿತು.

**ಈ ಹಂತದಲ್ಲಿ 1 ನೇ ಎದುರುದಾರ ಪರ ವಕೀಲರನ್ನು ಕೂಗಿ ಕೆರೆಯಿಸಲಾಯಿತು ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ ಎಂ ವೈ ಎ**

ಅಪಘಾತವಾದ ತಕ್ಷಣ ಅರ್ಜಿದಾರರನ್ನು ಚಿಕಿತ್ಸೆಗೆ ಒಳಪಡಿಸಿದ್ದು ನಾನೇ ಎಂದರೆ ಸರಿ. ಅಪಘಾತವಾದ ತಕ್ಷಣ ನಮ್ಮ ಬಳಿ ಬಂದರೆ ಎಂ ಎಲ್ ಸಿ ಮಾಡುವುದು ನಮ್ಮ ಕರ್ತವ್ಯ ಎಂದರೆ ಸಾಕ್ಷಿ ಹೌದು ಆದರೆ ನಾನು ಮಾಡಿಲ್ಲ ಎಂದರೆ ಇಲ್ಲ ಅದು ಡ್ಯೂಟಿ ಡಾಕ್ಟರ ಕರ್ತವ್ಯ ಎನ್ನುತ್ತಾರೆ. ಅರ್ಜಿದಾರರಿಗೆ 2 ಗಾಯಗಳಾಗಿವೆ ಎಂದರೆ ಸರಿ. ಅದರಲ್ಲಿ ಒಂದು fracture ಹಾಗೂ ಮತ್ತೊಂದು ಸಾದಾ ಸ್ವರೂಪದ ಗಾಯ ಎಂದರೆ ಸರಿ. ನಾವು ಅರ್ಜಿದಾರರಿಗೆ ಯಾವುದೇ ಅಪರೇಷನ ಮಾಡಿರುವುದಿಲ್ಲ. ಅರ್ಜಿದಾರನ ವಯಸ್ಸು 9

ವರ್ಷ ಇರುವ ಕಾರಣ ಅವನಿಗೆ ವಯಸ್ಸಾದಂತೆ ಆತನಿಗೆ ಆಗಿರುವ ಗಾಯ ಮಾಯವಾಗುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಎಕ್ಸರೆ ಪ್ರಕಾರ ಅರ್ಜಿದಾರರಿಗೆ ಆದ ಗಾಯ ಸಂಪೂರ್ಣವಾಗಿ ಗುಣಮುಖವಾಗಿದೆ ಎಂದರೆ ಸರಿ. ಯಾವುದೇ ಒಂದು ಅಂಗನ್ಯೂನತೆ ಪ್ರಮಾಣ ಪತ್ರ ನೀಡಬೇಕಾದರೆ ಮೂರು ರೀತಿಯ ಪರೀಕ್ಷೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ

ಹೌದು ಎನ್ನುತ್ತಾರೆ. ಆ ರೀತಿ ಪರೀಕ್ಷೆ ಮಾಡಿರುತ್ತೇವೆಂದು ತೋರಿಸಲು ಯಾವುದೇ ವರದಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿ. ಸದರಿ ವರದಿ ಇಲ್ಲದಿರುವ ಕಾರಣ ನಾನು ಅಂಗನ್ಯೂನತೆ ಪ್ರಮಾಣ ಪತ್ರ ನೀಡಲು ಬರುವುದಿಲ್ಲವೆಂದರೆ ನಾನು ಕ್ಲಿನಿಕಲ್ examination ಮಾಡಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಅಂಗನ್ಯೂನತೆಯಲ್ಲಿ ಮೂರು ರೀತಿಯ ಅಂಗನ್ಯೂನತೆ ಇದೆ ಎಂದರೆ ಸರಿ. ಅದನ್ನು ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲವೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅರ್ಜಿದಾರರಿಗೆ ಆದಂತಹ ಅಂಗನ್ಯೂನತೆ ತಾತ್ಕಾಲಿಕ ಅಂಗನ್ಯೂನತೆ ಎಂದರೆ ಸಾಕ್ಷಿ ಶಾಶ್ವತ ಅಂಗನ್ಯೂನತೆ ಎನ್ನುತ್ತಾರೆ. ಆ ಕಾರಣಕ್ಕೆ ಮುಂದೆ ಅರ್ಜಿದಾರರಿಗೆ ಯಾವುದೇ ರೀತಿಯ ಶಾಶ್ವತ ಅಂಗನ್ಯೂನತೆ ಇರುವುದಿಲ್ಲವೆಂದರೆ ಸಾಕ್ಷಿ ಅದನ್ನು ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಅರ್ಜಿದಾರನು ಸಂಪೂರ್ಣವಾಗಿ ಗುಣಮುಖವಾಗಿದ್ದರು ಕೂಡಾ ಆತನಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಅಂಗನ್ಯೂನತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನೀಡಿರುವ ನಿಶಾನೆ ಪಿ 15 ಸರಿಯಾದ format ನಲ್ಲಿ ಇಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನಾನು 1 ಪ್ರತಿಶತಃ pain ಎಂದು ಕೊಡುತ್ತಿರುವುದು pain ಗೆ ಯಾವುದೇ ರೀತಿಯ ಅಂಗನ್ಯೂನತೆ ಬರುವುದಿಲ್ಲವೆಂದರೆ ಸಾಕ್ಷಿ ಬರುತ್ತದೆ mild pain 3% ಎಂಬುವುದಾಗಿ gazette ನಲ್ಲಿ ಇದೆ ಎನ್ನುತ್ತಾರೆ. ನಾನು ಸದರಿ ಅಂಗನ್ಯೂನತೆಯನ್ನು ಕೇವಲ Right lower limb ಗಾಗಿ ಕೊಟ್ಟಿರುತ್ತೇನೆಂದರೆ ಸರಿ. ಸಾಮಾನ್ಯವಾಗಿ particular ಅಂಗಕ್ಕೆ ಕೊಟ್ಟಾಗ ಅದನ್ನು ಸಂಪೂರ್ಣ ದೇಹಕ್ಕೆ ಹೋಲಿಸಿದರೆ ಅದರ ಪ್ರಮಾಣ ಕಡಿಮೆ ಬರುತ್ತದೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಸರಿಯಾದ ಚಿಕಿತ್ಸೆ ಕೊಟ್ಟಿರುತ್ತೇನೆಂದರೆ ಸರಿ. ಚಿಕಿತ್ಸೆ ಕೊಟ್ಟ ನಂತರ ಆತ ಸಂಪೂರ್ಣ ಗುಣಮುಖನಾಗಿರುತ್ತಾನೆಂದು ತಿಳಿದೆ ಬಿಡುಗಡೆ ಮಾಡಿದ್ದೇನೆಂದರೆ ಸರಿ. ಆತ ಸಂಪೂರ್ಣ ಗುಣಮುಖನಾಗಿದ್ದರು ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಅಂಗನ್ಯೂನತಾ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ